1. ಪ್ರತಿಪಕ್ಷದ ಅಧ್ಯಕ್ಷರು ಸದನಕ್ಕೆ ಹಾಜರಾಗಿ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸಲು ಮನವಿ

ಅಧ್ಯಕ್ಷರು: ನನ್ನದೊಂದು ವಿನಂತಿ ಇದೆ. ಅತ್ಯಂತ ಪ್ರಮುಖ ವಿಷಯವನ್ನು ನಾವು ಚರ್ಚೆ ಮಾಡಬೇಕಾಗಿತ್ತು. ಆಯವ್ಯಯಕ್ಕೆ ಪೂರಕವಾದ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆಯಾಗಿ ಬಹುಶಃ ರಾಜ್ಯದ ಜನರ ಎಲ್ಲಾ ಸಮಸ್ಯೆಗಳನ್ನು ಇಲ್ಲಿ ಪ್ರಸ್ತಾಪಿಸಿ ಸರ್ಕಾರದಿಂದ ಅದಕ್ಕೆ ಸಮರ್ಪಕ ಉತ್ತರ ಪಡೆದು ಜನತೆಗೆ ಒಳ್ಳೆಯ ಸಂದೇಶ ಕೊಡಬೇಕೆಂಬ ದೃಷ್ಟಿಯಿಂದ ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಈ ಅಧಿವೇಶನ ಕರೆಯಲಾಗಿತ್ತು. ಆದರೆ, ಈ ಕಡೆಯ ಎಲ್ಲಾ ಗೌರವಾನ್ವಿತ ಸದಸ್ಯರು ಯಾವುದೋ ಕಾರಣ ಇಟ್ಟು ಇವತ್ತು ಗೈರು ಹಾಜರಾಗಿದ್ದಾರೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಒಳ್ಳೆಯದಲ್ಲ. ನಾನು ಈ ಸದನದ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಸದನಕ್ಕೆ ಹಾಜರಾಗಿ ಸದನದ ಎಲ್ಲಾ ಕಾರ್ಯಕಲಾಪಗಳಲ್ಲೂ ಭಾಗವಹಿಸಬೇಕೆಂಬುದು ನನ್ನ ಅಪೇಕ್ಷೆ. ಸದನ ನಡೆಯುವುದಕ್ಕೆ ಇನ್ನಾದರೂ ಸಹಕಾರ ಕೊಡಬೇಕೆಂದು ನಾನು ಈ ಸದನದ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಎರಡೂ ಕಡೆ ಇರುವ ಚುನಾಯಿತ ಪ್ರತಿನಿಧಿಗಳು ಆಯವ್ಯಯಕ್ಕೆ ಸಂಪೂರ್ಣವಾಗಿ ಮಂಜೂರಾತಿ ಕೊಡಬೇಕಾದ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಹಣಕಾಸಿನ ವಿಷಯದ ಕುರಿತಾಗಿ ಸಮಗ್ರವಾಗಿ ಚರ್ಚಿಸಿ ಅವರ ಸಲಹೆಗಳನ್ನು ಕೊಡಬೇಕಾಗಿರುವುದು ಪ್ರತಿಪಕ್ಷಗಳ ಕರ್ತವ್ಯವಾಗಿದೆ. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆದುಕೊಂಡು. ಬಂದಿರುವ ಒಂದು ಸತ್ಸಂಪ್ರದಾಯ. ಅದೇ ರೀತಿ ಒಂದು ಸರ್ಕಾರದ ಮೊದಲನೆಯ ಕರ್ತವ್ಯ ಏನೆಂದರೆ, ನಾಡಿನ ಜನತೆಗೆ ಸಂಬಂಧಪಟ್ಟ ಪ್ರಮುಖ ಮಸೂದೆಗಳಿಗೆ ಮಂಜೂರಾತಿ ಕೊಟ್ಟು ಚರ್ಚೆ ಮಾಡಿ ತಿದ್ದುಪಡಿ ತರುವ ಸಂದರ್ಭದಲ್ಲಿ ಸದನದಲ್ಲಿ ಹಾಜರಿದ್ದು ಸಲಹೆಗಳನ್ನು ಕೊಡಬೇಕಾದ್ದು ಅವರ ಕರ್ತವ್ಯ. ಪ್ರಶ್ನೋತ್ತರಗಳು ಅಷ್ಟೇ ಪ್ರಮುಖವಾದುದು. ಏಕೋ ಏನೋ ಸದನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೆ ಒಂದಲ್ಲ ಒಂದು ಕಾರಣಕ್ಕೆ ವಿರೋಧಪಕ್ಷದವರು ಸದನದ ಕಾರ್ಯಕಲಾಪಗಳನ್ನು ಬಹಿಷ್ಕರಿಸಿದ್ದಾರೆ. ನನಗೆ ನೆನಪಿರುವಂತೆ ಸ್ವಾತಂತ್ರ್ಯ ಬಂದ ನಂತರ ಈ ಮನೆಯಲ್ಲಿ ಆಯವ್ಯಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನೂ ಕೊಡುವುದಿಲ್ಲ ಅಥವಾ ಬೇರೆ ಕಾರಣಗಳನ್ನು ಹೇಳಿ ಸರ್ಕಾರ ಹೀಗೆಯೇ

ನಡೆದುಕೊಳ್ಳಬೇಕೆಂದು ಮೊಂಡು ವಾದ ಮಂಡಿಸುವುದು ಬಹುಶಃ ಪ್ರಜಾತಂತ್ರ ವ್ಯವಸ್ಥೆಗೆ ಗೌರವ ತರುವಂಥದ್ದಲ್ಲ. ನಾನು ಮಾಧ್ಯಮದ ಸ್ನೇಹಿತರ ಮೂಲಕ ಅನೇಕ ಬಾರಿ ವಿನಂತಿಸಿದ್ದೇನೆ. ಬನ್ನಿ, ನಿಮ್ಮ ಸಲಹೆಗಳನ್ನು ಕೊಡಿ, ಚರ್ಚಿಸೋಣ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷವು ತನ್ನ ಕರ್ತವ್ಯ ನಿರ್ವಹಿಸುತ್ತಿದೆ. ಅದೇ ರೀತಿ ವಿರೋಧ ಪಕ್ಷವು ತನ್ನ ಕರ್ತವ್ಯ ನಿರ್ವಹಿಸಬೇಕು. ಆ ಸಂದರ್ಭದಲ್ಲಿ ಅವರು ಅನೇಕ ಬೇಡಿಕೆ, ಒತ್ತಾಯಗಳನ್ನು ಮಂಡಿಸುತ್ತಾರೆ. ಆ ಒತ್ತಾಯಕ್ಕೆ ಸೂಕ್ತ ತೀರ್ಮಾನವನ್ನು ಕೈಗೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಬಹುಮತವಿರುವ ಒಂದು ಸರ್ಕಾರಕ್ಕೆ ಇದ್ದೇ ಇದೆ. ಹೀಗೆಯೇ ಮಾಡಬೇಕೆಂದು ಯಾವುದೇ ಸಂದರ್ಭದಲ್ಲೂ, ಯಾವುದೇ ವಿರೋಧ ಪಕ್ಷಗಳು ಹೇಳಲು ಸಾಧ್ಯವಿಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆ ನಡೆದುಕೊಂಡು ಬಂದಿರುವ ದಾರಿಯಾಗಿದೆ. ಈಗಲಾದರೂ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸಿ ಪೂರ್ಣ ಆಯವ್ಯಯದ ಮಂಜೂರಾತಿಗಾಗಿ ಅವರ ಸಲಹೆ–ಸಹಕಾರ ನೀಡಬೇಕೆಂದು ಈ ಮನೆಯ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ರಾಜ್ಯದ ಜನತೆ ಎಲ್ಲವನ್ನೂ ಗಮನಿಸುತ್ತಿದೆ. ಇದೇ ಮೊದಲಲ್ಲ, ನಾನು ಮುಖ್ಯಮಂತ್ರಿಯಾದ ದಿವಸದಿಂದ ಇವತ್ತಿನವರೆಗೆ ಒಂದಲ್ಲ ಒಂದು ಕಾರಣಕ್ಕಾಗಿ ವಿಧಾನಮಂಡಲದ ಅಧಿವೇಶನವನ್ನು ಬಹಿಷ್ಕರಿಸುವುದು ಮತ್ತು ಬೇರೆ ನೆಪಗಳನ್ನೊಡ್ಡಿ ಧರಣಿ, ಸಭಾತ್ಯಾಗ ಮಾಡುವ ಸಂಪೂರ್ಣ ಸ್ವಾತಂತ್ರ್ಯ ಇದ್ದೇ ಇದೆ. ನಾವೇನೂ ಅವರುಗಳನ್ನು ಹೊರಗಡೆ ಹಾಕಿಲ್ಲ. ಮಾನ್ಯ ಅಧ್ಯಕ್ಷರಿಗೆ ಮತ್ತು ನನಗೆ ನೆನಪಿರುವಂತೆ ನಾವು ಬಹಳಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ಸದನದ ಒಳಗೆ, ಹೊರಗೆ ಅಧ್ಯಕ್ಷರಿಗೆ ಅವಹೇಳನಕಾರಿಯಾದ ಮಾತುಗಳು ಹೇಳುವುದನ್ನು ಯಾರೂ ಸಹಿಸಲು ಸಾಧ್ಯವಿಲ್ಲ. ಆದರೂ ಸಹ ನಾವು ಎಲ್ಲವನ್ನೂ ಸಹಿಸಿಕೊಂಡು ಕಲಾಪದಲ್ಲಿ ಅವರಿಗೆ ಸಹಕರಿಸಲು ಸಿದ್ಧರಿದ್ದೇವೆ. ಈಗಲಾದರೂ ಸದನಕ್ಕೆ ಬಂದು ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಬೇಕೆಂದು ಸನ್ಮಾನ್ಯ ಅಧ್ಯಕ್ಷರೆ, ತಮ್ಮ ದನಿಗೆ ನಾನೂ ದನಿಗೂಡಿಸುತ್ತಾ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.